ಶಾಂತಿ ಪ್ರಕಾಶನ ರಜತ ಮಹೋತ್ಸವ

'ಶಾಂತಿಗಾಗಿ ಸಾಹಿತ್ಯ' ಅಭಿಯಾನ

2013, ನವೆಂಬರ್ 1–30

ರಜತ ಮಹೋತ್ಸವ ರಾಜ್ಯ ಸ್ವಾಗತ ಸಮಿತಿ

ಗೌರವಾಧ್ಯಕ್ಷರು

- **ಡಾ॥ ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳು**
  ತೋಂಟದಾರ್ಯ ಸಂಸ್ಥಾನ ಮಠ, ಗದಗ

ಸದಸ್ಯರು

- **ಶ್ರೀ ನಿ.ಪ್ರ. ಶಿವಾನುಭವ ಶಿವರುದ್ರ ಮಹಾಸ್ವಾಮಿಗಳು**
  ಬೇಲಿಮಠ ಮಹಾಸಂಸ್ಥಾನ, ಬೆಂಗಳೂರು
- **ಡಾ॥ ಚಂದ್ರಶೇಖರ ಕಂಬಾರ**
  ಹಿರಿಯ ಸಾಹಿತಿಗಳು, ಜ್ಞಾನಪೀಠ ಪುರಸ್ಕೃತರು, ಬೆಂಗಳೂರು
- **ಶ್ರೀ ಪುಂಡಲೀಕ ಹಾಲಂಬಿ**
  ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
- **ಡಾ॥ ನಾ. ಡಿ'ಸೋಜ**
  ಹಿರಿಯ ಸಾಹಿತಿಗಳು, ಸಾಗರ
- **ಜ॥ ಎಂ. ಅಬ್ದುರ್ರಹ್ಮಾನ್ ಪಾಶಾ**
  ಚಲನಚಿತ್ರ ಸಾಹಿತಿ ಮತ್ತು ನಿರ್ದೇಶಕರು, ಬೆಂಗಳೂರು
- **ಶ್ರೀಮತಿ ವೈದೇಹಿ**
  ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತರು, ಮಣಿಪಾಲ
- **ಶ್ರೀಮತಿ ಬಾನು ಮುಷ್ತಾಕ್**
  ಖ್ಯಾತ ಸಾಹಿತಿಗಳು ಮತ್ತು ವಕೀಲರು, ಹಾಸನ
- **ಶ್ರೀ ಬಂಜಗೆರೆ ಜಯಪ್ರಕಾಶ್**
  ಖ್ಯಾತ ಚಿಂತಕರು, ಸಾಹಿತಿಗಳು, ಬೆಂಗಳೂರು
- **ಜ॥ ಬಿ.ಎಮ್. ಹನೀಫ್**
  ಹಿರಿಯ ಪತ್ರಕರ್ತರು, ಬೆಂಗಳೂರು
- **ಶ್ರೀ ಹೃಷಿಕೇಶ್ ಬಹಾದ್ದೂರ್ ದೇಸಾಯಿ**
  ಹಿರಿಯ ಪತ್ರಕರ್ತರು, ಬೀದರ್
- **ಜ॥ ಮುಹಮ್ಮದ್ ಅಬ್ದುಲ್ಲಾ ಜಾವೇದ್**
  ಅಧ್ಯಕ್ಷರು, ಶಾಂತಿ ಪ್ರಕಾಶನ
- **ಡಾ॥ ಮುಹಮ್ಮದ್ ಸಅದ್ ಬೆಳಗಾಮಿ**
  ಸಂಚಾಲಕರು, ರಾಜ್ಯ ಸ್ವಾಗತ ಸಮಿತಿ
- **ಜ॥ ಕೆ.ಎಮ್. ಅಶ್ರಫ್**
  ಸದಸ್ಯರು, ಶಾಂತಿ ಪ್ರಕಾಶನ

30–10–2013

ಪತ್ರಿಕಾ ಪ್ರಕಟಣೆ

1988ರಲ್ಲಿ ಸ್ಥಾಪಿಸಲ್ಪಟ್ಟ ಶಾಂತಿ ಪ್ರಕಾಶನವು ಕಳೆದ 25 ವರ್ಷಗಳಿಂದ ಕನ್ನಡ ಸಾಹಿತ್ಯ ರಂಗಕ್ಕೆ ತನ್ನ ಅಮೂಲ್ಯ ಕೊಡುಗೆಗಳನ್ನು ಅರ್ಪಿಸುತ್ತ ಬಂದಿರುವ ಮೌಲ್ಯಾಧಾರಿತ ಪ್ರಕಾಶನ ಸಂಸ್ಥೆಯಾಗಿದೆ. ಬಹುಧರ್ಮೀಯ ಸಮಾಜದಲ್ಲಿ ಶಾಂತಿ, ಸಹಬಾಳ್ವೆ, ಕೋಮು ಸೌಹಾರ್ದ ನೆಲೆಸಬೇಕಾದರೆ ಧರ್ಮಗಳ ಕುರಿತಂತೆ ಅತ್ಯಂತ ಸ್ಪಷ್ಟ ಮತ್ತು ಖಚಿತವಾದ ತಿಳುವಳಿಕೆ ಇರಬೇಕಾದುದು ಅತ್ಯಗತ್ಯ. ಧರ್ಮದ ವಿಷಯದಲ್ಲಿ ಪರಸ್ಪರ ತಿಳುವಳಿಕೆಯ ಕೊರತೆಯೇ ಜನರಲ್ಲಿ ತಪ್ಪುಕಲ್ಪನೆ, ಅಪನಂಬಿಕೆ, ಸಂದೇಹ ಹಾಗೂ ದ್ವೇಷಗಳಿಗೆ ಕಾರಣವಾಗುತ್ತದೆ. ಅವುಗಳನ್ನು ನೀಗಿಸಿ ಸಮಾಜದಲ್ಲಿ ಪರಸ್ಪರ ವಿಶ್ವಾಸ, ಪ್ರೀತಿ, ಸೌಹಾರ್ದ, ಸಹೋದರತೆಯೇ ಮೊದಲಾದ ಉದಾತ್ತ ಗುಣಗಳನ್ನು ಬೆಳೆಸುವುದೇ ಶಾಂತಿ ಪ್ರಾಕಾಶನದ ಉದ್ದೇಶವಾಗಿದೆ.

ಈವರೆಗೆ ಶಾಂತಿ ಪ್ರಕಾಶನವು 250 ಕೃತಿಗಳನ್ನು ಪ್ರಕಟಿಸಿದೆ. ಕೇವಲ ಅರಬಿ ಭಾಷಾ ಜ್ಞಾನದಿಂದ ಮಾತ್ರ ಗ್ರಹಿಸಬೇಕಾಗಿದ್ದ ಇಸ್ಲಾಮಿನ ಮೂಲ ಗ್ರಂಥವಾದ ಪವಿತ್ರ ಕುರ್‌ಆನಿನ ಕನ್ನಡ ಅನುವಾದ ಮತ್ತು ವ್ಯಾಖ್ಯಾನ ಗ್ರಂಥಗಳು ಕನ್ನಡ ಜನಕೋಟಿಗೆ ಶಾಂತಿ ಪ್ರಕಾಶನದ ಅಮೂಲ್ಯ ಕೊಡುಗೆಗಳಾಗಿವೆ. ಹಾಗೆಯೇ ಪ್ರವಾದಿ ಜೀವನ ಮತ್ತು ಸಂದೇಶ, ಪ್ರವಾದಿ ವಚನಗಳ ಸಂಗ್ರಹ, ಕೌಟುಂಬಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಮೊದಲಾದ ಜೀವನದ ವಿವಿಧ ರಂಗಗಳಿಗೆ ಸಂಬಂಧಿಸಿದ ನೂರಾರು ಕೃತಿಗಳನ್ನು ಶಾಂತಿ ಪ್ರಕಾಶನವು ಪ್ರಕಟಿಸಿದೆ. ಶಾಂತಿ ಪ್ರಕಾಶನ ಹೊರತಂದ ಕುರ್‌ಆನ್ ವ್ಯಾಖ್ಯಾನ ಮತ್ತು ಇತರ ಕೃತಿಗಳು ಕನ್ನಡ ಸಾಹಿತ್ಯ ಲೋಕದ ಅನೇಕರ ಪ್ರಶಂಸೆಗೆ ಪಾತ್ರವಾಗಿದೆ.

ಶಾಂತಿ ಪ್ರಕಾಶನಕ್ಕೆ 25ವರ್ಷ ತುಂಬಿರುವ ಈ ಸಂದರ್ಭದಲ್ಲಿ ಕರ್ನಾಟಕದಾದ್ಯಂತ ಅದರ ಸಾಹಿತ್ಯ ಕೃತಿಗಳ ಪರಿಚಯ ಹಾಗೂ ತನ್ಮೂಲಕ ಶಾಂತಿಯುತ ಸಮಾಜ ನಿರ್ಮಾಣದ ಉದ್ದೇಶದೊಂದಿಗೆ **'ಶಾಂತಿಗಾಗಿ ಸಾಹಿತ್ಯ'** ಎಂಬ ಅಭಿಯಾನವನ್ನು ಹಮ್ಮಿಕೊಂಡಿದೆ. **2013, ನವೆಂಬರ್ 1 ರಿಂದ 30**ರ ತನಕ ರಾಜ್ಯದೆಲ್ಲೆಡೆ ನಡೆಯಲಿರುವ ಈ ಕಾರ್ಯಕ್ರಮಕ್ಕಾಗಿ ರಾಜ್ಯ ಮಟ್ಟದ ಪ್ರಮುಖ ಸಾಹಿತಿಗಳು, ಪತ್ರಕರ್ತರು ಹಾಗೂ ಬುದ್ಧಿಜೀವಿಗಳನ್ನೊಳಗೊಂಡ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಅದೇ ರೀತಿ ಪ್ರತೀ ಜಿಲ್ಲಾ ಮಟ್ಟದಲ್ಲೂ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ.

ಅಭಿಯಾನದ ಅಂಗವಾಗಿ ರಾಜ್ಯದಾದ್ಯಂತ ಬೃಹತ್ ಪುಸ್ತಕ ಮೇಳ, ವಸ್ತು ಪ್ರದರ್ಶನ, ಸಾಹಿತ್ಯ–ಸಂವಾದ, ವಿಚಾರಗೋಷ್ಠಿ, ಮಹಿಳಾ ಮತ್ತು ಮಕ್ಕಳ ಕಾರ್ಯಕ್ರಮಗಳು, ಬಹುಭಾಷಾ ಕವಿಗೋಷ್ಠಿ, ಪ್ರಕಾಶಕರ ಸಮ್ಮಿಲನ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಮಾತ್ರವಲ್ಲದೆ ಅಭಿಯಾನದ ಪ್ರಯುಕ್ತ ವಿವಿಧ ಪುಸ್ತಕಗಳನ್ನು ಬಿಡುಗಡೆಗೊಳಿಸಲಾಗುತ್ತಿದೆ.

ತಾವು ಈ ಕಾರ್ಯಕ್ರಮಗಳಿಗೆ ಗರಿಷ್ಠ ಪ್ರಚಾರವನ್ನು ನೀಡಿ ಸಹಕರಿಸಬೇಕಾಗಿ ತಮ್ಮಲ್ಲಿ ವಿನಮ್ರ ವಿನಂತಿ.

ಕೃತಜ್ಞತೆ ಹಾಗೂ ಗೌರವಾದರಗಳೊಂದಿಗೆ

ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸುವವರು:

ಕೆ ಮುಹಮ್ಮದ್ ಅಶ್ರಫ್, ಅಭಿಯಾನ ಸಂಚಾಲಕರು
ಡಾ। ಮುಹಮ್ಮದ್ ಸಅದ್ ಬೆಳಗಾಮಿ, ರಾಜ್ಯ ಸ್ವಾಗತ ಸಮಿತಿ ಸಂಚಾಲಕರು
ಸೈಯದ್ ಗುಲಾಮ್ ಮೌಲಾ, ಕಾರ್ಯದರ್ಶಿ, ಶಾಂತಿ ಪ್ರಕಾಶನ

ಶಾಂತಿ ಪ್ರಕಾಶನ
ಹಿದಾಯತ್ ಸೆಂಟರ್, ಬೀಬಿ ಅಲಾಬಿ ರಸ್ತೆ, ಮಂಗಳೂರು – 575001, ದೂರವಾಣಿ : 0824 2422785
Email : info@shanthiprakashana.com Website : www.shanthiprakashana.in